ಇ) ಮಲ್ಪೆ ಬೀಚ್ ರಿಸಾರ್ಟ್ ಕಟ್ಟಡ ಅಭಿವೃದ್ಧಿ ಬಗ್ಗೆ ಸರಕಾರದ ಕ್ರಮಗಳೇನು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :—

ಅ) ಪ್ರವಾಸೋದ್ಯಮ ಇಲಾಖೆಯು ಈ ಸ್ಥಳವನ್ನು ಪ್ರೇಕ್ಷಣೀಯ ಸ್ಥಳವೆಂದು ಗುರ್ತಿಸಿದೆ. ಮಲ್ಪೆ ಕಡಲ ತೀರಕ್ಕೆ ಹೊನಲು ಬೆಳಕು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಪ್ರವಾಸಿಗರ ಉಪಯೋಗಕ್ಕಾಗಿ ಮಲ್ಪೆ ಕಡಲ ತೀರ ಹಾಗೂ ಸೆಂಟ್ ಮೆರೀಸ್ ದ್ವೀಪದ ಮಧ್ಯೆ ದೋಣಿ ಸೌಲಭ್ಯವನ್ನು ಒದಗಿಸಲಾಗಿದೆ.

ಇ) ಮಲ್ಪೆ ಬೀಚ್‌ನಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಅರ್ಧ ಕಟ್ಟಿ ನಿಲ್ಲಿಸಿರುವ ಕಟ್ಟಡವನ್ನು ಉಡುಪಿ ಜಿಲ್ಲಾಧಿಕಾರಿಗಳು ಅದನ್ನು ಸರ್ಕಾರಿ ವಸತಿ ಗೃಹವನ್ನಾಗಿ ಮಾಡಲು ತಮಗೆ ನೀಡುವಂತೆ ಕೋರಿದ್ದರು. ಈ ಕಟ್ಟಡದ ನಿರ್ಮಾಣಕ್ಕೆ ವೆಚ್ಚವಾಗಿರುವ ಮೊತ್ತವನ್ನು ಕೊಟ್ಟಲ್ಲಿ, ಜಿಲ್ಲಾಧಿಕಾರಿಗಳಿಗೆ ಈ ಕಟ್ಟಡ ಹಸ್ತಾಂತರಿಸಲಾಗುವುದೆಂದು ತಿಳಿಸಿದೆ.

ದರ್ಜಿಗಳಿಗೆ ಕ್ಷೇಮನಿಧಿ ಯೋಜನೆ ಜಾರಿಗೊಳಿಸುವುದು.

2076(3230) ಶ್ರೀ ಶಂಕರ ಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಟೈಲರ್ (ದರ್ಜಿ)ಗಳಿಗೆ ಕೇರಳ, ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಲ್ಲಿರುವಂತೆ ಕ್ಷೇಮನಿಧಿ ಯೋಜನೆ ಜಾರಿಗೊಳಿಸಲಾಗಿದೆಯೆ;

ಆ) ಸದರಿ ಸಂಬಂಧದ ಯೋಜನೆಯ ವಿವರಗಳನ್ನು ಒದಗಿಸುವುದು;

ಇ) ಅದೇ ರೀತಿ ರಾಜ್ಯ ಸರ್ಕಾರ ಕೂಡ ಟೈಲರ್‌ಗಳಿಗಾಗಿ ಕ್ಷೇಮನಿಧಿ ಯೋಜನೆ ಜಾರಿಗೊಳಿಸುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಅಸಂಘಟಿತ ಕಾರ್ಮಿಕರ ಹಿತರಕ್ಷಣೆಗಾಗಿ ರಾಜ್ಯ ಸರ್ಕಾರವು ಒಂದು ಕಾಯ್ದೆಯನ್ನು ಜಾರಿಗೆ ತರಲಿದೆ. ಆ ಕಾಯ್ದೆಯಲ್ಲಿ ಟೈಲರ್‌ಗಳ ಕಲ್ಯಾಣಕ್ಕಾಗಿ ಸೂಕ್ತ ನಿಯಮಗಳನ್ನು ಸಲ್ಲಿಸಲಾಗಿದೆ.